KACD410014982023

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.</u>**

**<u>ಉಪಸ್ಥಿತರು</u>**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 06 ನೇ ಏಪ್ರಿಲ್, 2026**

**<u>ಸಿ.ಸಿ. ಸಂಖ್ಯೆ-440/2023</u>**

ಫಿರ್ಯಾದಿ: ರಾಜ್ಯದ ಪರವಾಗಿ, ಹೊಳಲ್ಕೆರೆ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

ಆರೋಪಿತರು:

1. ಶಿವಮೂರ್ತಪ್ಪ ಯಾನೆ ಶಿವಮೂರ್ತಿ
   ಬಿನ್ ತಿಮ್ಮಪ್ಪ,
   ವಯಸ್ಸುಃ ಸುಮಾರು 38 ವರ್ಷ,
2. ಕರಿಯಪ್ಪ ಬಿನ್ ಕರಿಯಪ್ಪ,
   ವಯಸ್ಸುಃ ಸುಮಾರು 32 ವರ್ಷ,
3. ಗಟ್ಟೆಪ್ಪ ಯಾನೆ ಗಟ್ಟಿಯಪ್ಪ ಬಿನ್ ತಿಮ್ಮಪ್ಪ,
   ವಯಸ್ಸುಃ ಸುಮಾರು 31 ವರ್ಷ,
4. ಪ್ರಹ್ಲಾದ ಬಿನ್ ಮಹಾದೇವಪ್ಪ,
   ವಯಸ್ಸುಃ ಸುಮಾರು 23 ವರ್ಷ,

5. ಬಸವರಾಜಪ್ಪ ಯಾನೆ ಬಸವರಾಜ
ಬಿನ್ ಮಹಾದೇವಪ್ಪ,
ವಯಸ್ಸುಃ ಸುಮಾರು 20 ವರ್ಷ,

6. ಮಹಾದೇವಪ್ಪ ಬಿನ್ ನಾಗಪ್ಪ,
ವಯಸ್ಸುಃ ಸುಮಾರು 48 ವರ್ಷ,

ಎಲ್ಲರೂ ವ್ಯವಸಾಯಗಾರರು ಮತ್ತು
ವಾಸಃ ದುಮ್ಮಿ ಗೊಲ್ಲರಹಟ್ಟಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ.

(ಪ್ರತಿನಿಧಿಸುವವರುಃ ಶ್ರೀ ಹೆಚ್. ರಮೇಶ್, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 14.06.2023 |
| 2 | ಅಪರಾಧ ವರದಿಯಾದ ದಿನಾಂಕ | 14.06.2023 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | – |
| 4 | ಫಿರ್ಯಾದಿಯ ಹೆಸರು | ಸವಿತ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 26.03.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 26.03.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 323, 324, 354(ಬಿ), 506 ಸಹವಾಚಕ 149 |
| 8 | ನ್ಯಾಯಾಧೀಶರ ಅಭಿಪ್ರಾಯ | 1 ರಿಂದ 6 ನೇ ಆರೋಪಿತರು ನಿರಪರಾಧಿಗಳು |

* * * * *

**ತೀರ್ಪು**

1 ರಿಂದ 6 ನೇ ಆರೋಪಿತರ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಹೊಳಲ್ಕೆರೆ ಪೊಲೀಸ್ ಠಾಣೆ, ಹೊಳಲ್ಕೆರೆರವರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ, 1 ರಿಂದ 6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 323, 324, 354(ಬಿ) ಮತ್ತು 506 ಸಹವಾಚಕ 149 ರ ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ದಿನಾಂಕ 14.06.2023 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ, ಹೊಳಲ್ಕೆರೆ ತಾಲ್ಲೂಕು, ದುಮ್ಮಿಗೊಲ್ಲರ ಹಟ್ಟಿ ಗ್ರಾಮದ ಚಾಸಾ-1 ರವರ ಖಾಲಿ ಜಾಗದ ಬಳಿಯ ಓಡಾಡುವ ಕಚ್ಚಾ ರಸ್ತೆಯಲ್ಲಿ, ಆರೋಪಿತರು ಕುರಿಶೆಡ್ಡು ಕಟ್ಟಲು ಗುಂಡಿ ತೆಗೆಯುತ್ತಿ ರುವಾಗ, ಚಾಸಾ-1 ಮತ್ತು ಚಾಸಾ-4 ರಿಂದ 6 ರವರು ಕೇಳಿದ್ದಕ್ಕೆ, 1 ರಿಂದ 6 ನೇ ಆರೋಪಿತರು ಏಕಾಏಕಿ ಅಕ್ರಮ ಗುಂಪು ಕಟ್ಟಿಕೊಂಡು ಕೈಗಳಲ್ಲಿ ಹಾರೆಕೋಲು ಹಿಡಿದುಕೊಂಡು ಬಂದವರೆ, ಚಾಸಾ-1 ಮತ್ತು ಚಾಸಾ-4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಚಾಸಾ-1 ರವರಿಗೆ 2 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಾಡಿ, ಕೈ-ಕಾಲುಗಳಿಂದ ಹೊಡೆದಿದ್ದು, ಚಾಸಾ-1 ರವರು ತೊಟ್ಟಿದ್ದ ನೈಟಿ ಹಿಡಿದು ಎಳೆದಾಡಿ, ಚಾಸಾ-1 ರವರ ಎದೆಗೆ ಗುದ್ದಿ, ಚಾಸಾ-1 ರವರ ಮಾನಕ್ಕೆ ಚ್ಯುತಿಯುಂಟು ಪಡಿಸಿದ್ದು, ಗಲಾಟೆ ಬಿಡಿಸಲು ಬಂದ ಚಾಸಾ-5 ರವರಿಗೆ 2 ನೇ ಆರೋಪಿತರು ಕೋಲಿನಿಂದ ಮೈ ಕೈಗೆ, ಬಲಭುಜಕ್ಕೆ ಹೊಡೆದಿದ್ದು, 1 ನೇ ಆರೋಪಿತರು ಹಾರೆಕೋಲಿನಿಂದ ಚಾಸಾ-6 ರವರ ಎಡಪಕ್ಕೆಗೆ, ಎದೆಗೆ ತಿವಿದಿದ್ದು, 4 ನೇ ಆರೋಪಿತರು ತನ್ನ ಕೈಯಲ್ಲಿದ್ದ ಬಿದಿರಿನಕೋಲಿನಿಂದ ಚಾಸಾ-6 ಹಣೆಗೆ, ಚಾಸಾ-4 ರವರ ಮೈ ಕೈಗೆ, ಎಡಭುಜಕ್ಕೆ ಹೊಡೆದಿದ್ದು, 5 ಮತ್ತು 6 ನೇ ಆರೋಪಿತರು ಕೈ-ಕಾಲುಗಳಿಂದ ಚಾಸಾ-1 ಮತ್ತು 5 ರವರ ಮೈ-ಕೈಗೆ ಹೊಡೆದಿದ್ದು, ಆರೋಪಿತರೆಲ್ಲರೂ ಕೈ-ಕಾಲುಗಳಿಂದ ಗಲಾಟೆ ಬಿಡಿಸಲು ಬಂದ ಚಾಸಾ-7 ರವರ ಮೈ-ಕೈಗೆ ಹೊಡೆದಿದ್ದು, 4 ನೇ ಆರೋಪಿತರು ಚಾಸಾ-7 ರವರ ಹಣೆಗೆ, ಎದೆಗೆ, ಹೊಟ್ಟೆಗೆ ಗುದ್ದಿದ್ದು, ನಂತರ ಆರೋಪಿತರೆಲ್ಲರೂ ಸೇರಿ ಚಾಸಾ-1 ಮತ್ತು ಚಾಸಾ-4

ರಿಂದ 7 ರವರಿಗೆ ಪ್ರಾಣ ಬೇದರಿಕೆ ಹಾಕಿದ್ದು, ಚಾಸಾ-1 ಮತ್ತು ಚಾಸಾ-4 ರಿಂದ 7 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಪಡಿಸಿರುತ್ತಾರೆಂದು ಆರೋಪಿಸಲಾಗಿದೆ.

3. 1 ರಿಂದ 6 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಆರೋಪಣಾ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು. 1 ರಿಂದ 6 ನೇ ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, 1 ರಿಂದ 6 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ 1 ರಿಂದ 6 ನೇ ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ಹೇಳಿ ವಿವರಿಸಲಾಗಿ, 1 ರಿಂದ 6 ನೇ ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. 1 ರಿಂದ 6 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 13 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಗಾಯಾಳು ಸಾಕ್ಷಿದಾರರಾದ ಚಾಸಾ-4 ರಿಂದ 7 ರವರನ್ನು ಪ್ರಾಸಾ-2 ರಿಂದ 5 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3 ಮತ್ತು 8 ರಿಂದ 13 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 6 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

5. 1 ರಿಂದ 6 ನೇ ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ 1 ರಿಂದ 6 ನೇ ಆರೋಪಿತರ ವಿರುದ್ಧ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ.

6. 1 ರಿಂದ 6 ನೇ ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ-ವಿವಾದಗಳನ್ನು ಆಲಿಸಲಾಯಿತು. ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

1. ದಿನಾಂಕ 14.06.2023 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ, ಹೊಳಲ್ಕೆರೆ ತಾಲ್ಲೂಕು, ದುಮ್ಮಿಗೊಲ್ಲರ ಹಟ್ಟಿ ಗ್ರಾಮದ ಚಾಸಾ-1 ರವರ ಖಾಲಿ ಜಾಗದ ಬಳಿಯ ಓಡಾಡುವ ಕಚ್ಚಾ ರಸ್ತೆಯಲ್ಲಿ, ಕುರಿಶೆಡ್ಡು ಕಟ್ಟಲು ಗುಂಡಿ ತೆಗೆಯುತ್ತಿರುವಾಗ, ಚಾಸಾ-1 ಮತ್ತು ಚಾಸಾ-4 ರಿಂದ 6 ರವರು ಕೇಳಿದ್ದಕ್ಕೆ, 1 ರಿಂದ 6 ನೇ ಆರೋಪಿತರು ಏಕಾಏಕಿ ಏಕೋದ್ದೇಶದಿಂದ, ಚಾಸಾ-1 ಮತ್ತು ಚಾಸಾ-4 ರಿಂದ 6 ರವರ ಮೇಲೆ ಆಕ್ರಮ ಗುಂಪು ಕಟ್ಟಿಕೊಂಡು ಬಂದಿರುವ ಕಾರಣ, 1 ರಿಂದ 6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

2. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಚಾಸಾ-1, 4 ರಿಂದ 6 ರವರ ಮೇಲೆ ದೊಂಬಿ ನಡೆಸಿರುವ ಕಾರಣ, 1 ರಿಂದ 6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

3. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಕೈಗಳಲ್ಲಿ ಕೋಲುಗಳು ಮತ್ತು ಹಾರೆ ಕೋಲನ್ನು ಹಿಡಿದುಕೊಂಡು ಬಂದು ಚಾಸಾ-1 ಮತ್ತು 4 ರಿಂದ 6 ರವರ ಮೇಲೆ ದೊಂಬಿ ನಡೆಸಿರುವ ಕಾರಣ, 1 ರಿಂದ 6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

4. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರು ಚಾಸಾ-1 ಮತ್ತು 4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುವ ಕಾರಣ,1 ರಿಂದ 6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

5. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 2 ನೇ ಆರೋಪಿತರು ಕೈಕಾಲುಗಳಿಂದ ಚಾಸಾ-1 ರವರಿಗೆ ಹೊಡೆದಿದ್ದು, 4 ನೇ ಆರೋಪಿತರು ಚಾಸಾ-4 ರವರ ಮೈಕೈಗೆ, ಎಡಭುಜಕ್ಕೆ ಹೊಡೆದಿದ್ದು, 5 ಮತ್ತು 6 ನೇ ಆರೋಪಿತರು ಕೈಕಾಲುಗಳಿಂದ ಚಾಸಾ-1 ಮತ್ತು 5 ರವರ ಮೈಕೈಗೆ ಹೊಡೆದಿದ್ದು, 1 ರಿಂದ 6 ನೇ ಆರೋಪಿತರು ಗಲಾಟೆ ಬಿಡಿಸಲು ಬಂದ ಚಾಸಾ-7 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿತರು ಚಾಸಾ-7 ರವರ ಹಣೆಗೆ, ಎದೆಗೆ, ಹೊಟ್ಟೆಗೆ ಗುದ್ದಿದ್ದು, ಚಾಸಾ-1, 4, 5 ಮತ್ತು 7 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಪಡಿಸಿರುವ ಕಾರಣ, 1 ರಿಂದ

6 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

6. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 2 ನೇ ಆರೋಪಿತರು ಗಲಾಟೆ ಬಿಡಿಸಲು ಬಂದ ಚಾಸಾ-5 ರವರ ಮೈಕೈಗೆ, ಬಲಭುಜಕ್ಕೆ ಕೋಲಿನಿಂದ ಹೊಡೆದಿದ್ದು, 1 ನೇ ಆರೋಪಿತರು ಹಾರೆ ಕೋಲಿನಿಂದ ಚಾಸಾ-6 ರವರ ಎಡಪಕ್ಕೆಗೆ, ಎದೆಗೆ ತಿವಿದಿದ್ದು, 4 ನೇ ಆರೋಪಿತರು ತಮ್ಮ ಕೈಯಲ್ಲಿದ್ದ ಬಿದಿರಿನ ಕೋಲಿನಿಂದ ಚಾಸಾ-6 ರವರ ಹಣೆಗೆ ಹೊಡೆದಿದ್ದು, ಚಾಸಾ-5 ಮತ್ತು 6 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಪಡಿಸಿರುವ ಕಾರಣ, 1, 2 ಮತ್ತು 4 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

7. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 2 ನೇ ಆರೋಪಿತರು ಚಾಸಾ-1 ರವರು ತೊಟ್ಟಿದ್ದ ನೈಟಿ ಹಿಡಿದು ಎಳೆದಾಡಿ, ಎದೆಗೆ ಗುದ್ದಿ, ಚಾಸಾ-1 ರವರ ಮಾನಕ್ಕೆ ಚ್ಯುತಿ ಯುಂಟುಪಡಿಸಿರುವ ಕಾರಣ, 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

8. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರೆಲ್ಲರೂ ಸೇರಿ ಚಾಸಾ-1 ಮತ್ತು 4 ರಿಂದ 7 ರವರಿಗೆ ಕೊಲೆ ಬೆದರಿಕೆ ಹಾಕಿರುವ ಕಾರಣ,1 ರಿಂದ 6 ನೇ ಆರೋಪಿತರು

ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿ ದ್ದಾರೆಯೇ ?

9. ಹಾಗಿದ್ದರೆ ಯಾವ ಆಜ್ಞೆ?

9. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ:-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ, |
| ಅಂಶ-2 | : | ನಕಾರಾತ್ಮಕವಾಗಿ, |
| ಅಂಶ-3 | : | ನಕಾರಾತ್ಮಕವಾಗಿ, |
| ಅಂಶ-4 | : | ನಕಾರಾತ್ಮಕವಾಗಿ, |
| ಅಂಶ-5 | : | ನಕಾರಾತ್ಮಕವಾಗಿ, |
| ಅಂಶ-6 | : | ನಕಾರಾತ್ಮಕವಾಗಿ, |
| ಅಂಶ-7 | : | ನಕಾರಾತ್ಮಕವಾಗಿ, |
| ಅಂಶ-8 | : | ನಕಾರಾತ್ಮಕವಾಗಿ, |
| ಅಂಶ-9 | : | ಅಂತಿಮ ಆದೇಶದಂತೆ. |

## ಕಾ ರ ಣ ಗ ಳು

**10.** **ಅಂಶ-1 ರಿಂದ 8:-** ಈ ಎಂಟು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಈ ಅಂಶಗಳಿಗೆ ನೀಡುವಂತಹ ಕಾರಣಗಳು ಒಂದೇ ಆಗಿರುವುದರಿಂದ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ, ಈ ಎಂಟು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

11. ಈ ಮೇಲ್ಕಂಡ ಅಂಶಗಳ ಕುರಿತಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, 13 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಗಾಯಾಳು ಸಾಕ್ಷಿದಾರರಾದ

ಚಾಸಾ-4 ರಿಂದ 7 ರವರನ್ನು ಪ್ರಾಸಾ-2 ರಿಂದ 5 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3 ಮತ್ತು 8 ರಿಂದ 13 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 6 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

12. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗಾಗಲೀ, ಚಾಸಾ-4 ರಿಂದ 7 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿಯು ಮುಂದುವರೆದು ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು ಹಾಗೂ ತಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ.

13. ಈ ಪ್ರಕರಣದ ಗಾಯಾಳು ಸಾಕ್ಷಿದಾರರಾದ ಚಾಸಾ-4 ರಿಂದ 7 ರವರನ್ನು ಪ್ರಾಸಾ-2 ರಿಂದ 5 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನೆಡದಿಲ್ಲವೆಂದು, ಆರೋಪಿತರು ತಮಗಾಗಲೀ ಮತ್ತು ಚಾಸಾ-1 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲವೆಂದು ಹಾಗೂ ಈ ಪ್ರಕರಣದ ಕುರಿತು ತಾವು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ

ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿದಾರರು ಮುಂದುವರೆದು ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು ಹಾಗೂ ತಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿಮಾಡಿ ಕೊಂಡಿರುತ್ತೇವೆಂದು ನುಡಿದಿರುತ್ತಾರೆ.

14. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಂತೆ ಪ್ರಾಸಾ-1 ರವರು ದಿನಾಂಕ 14.06.2023 ರಂದು ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು, ತಮಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿರುವ ಕುರಿತು ನೀಡಿದ ಲಿಖಿತ ದೂರು ಆಗಿರುತ್ತದೆ. ನಿಪಿ-2 ರಂತೆ ಪ್ರಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಹಾಜರುಪಡಿಸಿರುತ್ತಾರೆ. ನಿಪಿ-3 ರಿಂದ 6 ರಂತೆ ದಿನಾಂಕ 16.06.2023 ರಂದು ನೀಡಿರುವಂತಹ ಪ್ರಾಸಾ-2 ರಿಂದ 5 ರವರ ಅಲ್ಲಗಳೆದ ಹೇಳಿಕೆಗಳನ್ನು ಹಾಜರುಪಡಿಸಿರುತ್ತಾರೆ.

15. ಈ ಮೇಲ್ಕಾಣಿಸಿದ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ರವರು ಫಿರ್ಯಾದುದಾರರಾಗಿದ್ದು ಮತ್ತು ಪ್ರಾಸಾ-2 ರಿಂದ 5 ರವರು ಗಾಯಾಳು ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತಮಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾಸಾ-1 ರವರು ಯಾವುದೇ ದೂರನ್ನು ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾಸಾ-2 ರಿಂದ 5 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಅಂಶವನ್ನು ಗಮನಿಸಿದಾಗ, 1 ರಿಂದ 6 ನೇ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳು ಕೇವಲ ಆರೋಪಗಳಾಗಿ ಉಳಿದಿದೆಯೇ ವಿನಃ ಸದರಿ ಆರೋಪಣೆಗಳನ್ನು ಸಾಬೀತುಪಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯು 1 ರಿಂದ 6 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ

ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ.

16. ಪ್ರಸ್ತುತ ಈ ಪ್ರಕರಣದಲ್ಲಿ 1 ರಿಂದ 6 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 323, 324, 354(ಬಿ) ಮತ್ತು 506 ಸಹವಾಚಕ 149 ರ ಅಡಿಯಲ್ಲಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಕಂಡ ಕಲಂಗಳನ್ನು ಪರಿಶೀಲಿಸಲಾಗಿ ಭಾರತೀಯ ದಂಡ ಸಂಹಿತೆ ಕಲಂ 504, 323 ಮತ್ತು 506 ರ ಅಪರಾಧಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 320 ರ ಅಡಿಯಲ್ಲಿ ರಾಜಿ ಮಾಡಿಕೊಳ್ಳಬಹುದಾದ ಅಪರಾಧಗಳು ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೆಯೇ ಪ್ರಾ.ಸಾ-1 ರಿಂದ 5 ರವರು ತಮ್ಮ ಪಾಟೀಸವಾಲಿನಲ್ಲಿ, ತಾವು ಹಾಗೂ 1 ರಿಂದ 6 ನೇ ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಹಾಗಾಗಿ ಉಭಯ ಪಕ್ಷಗಾರರ ನಡುವಣ ಸೌಹಾರ್ದಯುತ ಜೀವನಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವ ಕಾರಣ, ಅಭಿಯೋಜನೆ ಪರ ಸಾಕ್ಷ್ಯವನ್ನು ಅಂಗೀಕರಿಸಲಾಗುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

17. ಈ ಮೇಲ್ಕಂಡಂತೆ ಪ್ರಾ.ಸಾ-1 ರಿಂದ 5 ರವರು ತಮ್ಮ ಮುಖ್ಯ ವಿಚಾರಣೆ ಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತಮಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾ.ಸಾ-1 ರವರು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾ.ಸಾ-2 ರಿಂದ 5 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಅಭಿಯೋಜನೆಯು 1 ರಿಂದ 6 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ. ಸದರಿ ಸಂಶಯದ ಲಾಭವನ್ನು ಮತ್ತು ಈ ಪ್ರಕರಣದ ಫಿರ್ಯಾದುದಾರರಾದ ಹಾಗೂ ಗಾಯಾಳು ಸಾಕ್ಷಿದಾರರಾದ ಪ್ರಾ.ಸಾ-1 ರಿಂದ 5 ರವರು, ಆರೋಪಿತರೊಂದಿಗೆ ರಾಜಿಮಾಡಿಕೊಂಡಿರುವುದನ್ನು ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವುದನ್ನು ಪರಿಗಣನೆಗೆ ತೆಗೆದುಕೊಂಡು, 1 ರಿಂದ 6 ನೇ ಆರೋಪಿತರು

ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು ಮೇಲ್ಕಾಣಿಸಿದ ಅಂಶ-1 ರಿಂದ 8 ನ್ನು ನಕಾರಾತ್ಮಕವೆಂದು ಉತ್ತರಿಸಿರುತ್ತೇನೆ.

**18. ಅಂಶ-9:-** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ, ಈ ಕೆಳಗಿನಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, 1 ರಿಂದ 6 ನೇ ಆರೋಪಿತರನ್ನು ಅವರ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 323, 324, 354(ಬಿ) ಮತ್ತು 506 ಸಹವಾಚಕ ಕಲಂ 149 ರ ಆರೋಪಗಳಿಗಾಗಿ ನಿರಪರಾಧಿಗಳು ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ 1 ರಿಂದ 6 ನೇ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ, ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಮಾಲುಪಟ್ಟಿ ಸಂಖ್ಯೆ-74/2023 ಮತ್ತು ಪಿ.ಆರ್.ಸಂಖ್ಯೆ-42/2026 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಸುಮಾರು ಎರಡು ಅಡಿ ಉದ್ದದ ಒಳ ಹಿಡಿ ಗಾತ್ರದ ಕಬ್ಬಿಣದ ಮಂಡ ಹಾರೆಕೋಲು ಬೆಲೆಬಾಳುವ ವಸ್ತು ಆಗಿರುವುದರಿಂದ, ಮೇಲ್ಮನವಿ ಅವಧಿಯ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದ್ದೇನೆ.

ಮಾಲುಪಟ್ಟಿ ಸಂಖ್ಯೆ-74/2023 ಮತ್ತು ಪಿ.ಆರ್.ಸಂಖ್ಯೆ-42/2026 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಂದು ಸುಮಾರು ಎರಡುವರೆ ಅಡಿ ಉದ್ದದ ಒಳ ಹಿಡಿ ಗಾತ್ರದ ಕಾಡು ಜಾತಿಯ ಮರದ ಕೋಲು ಮತ್ತು ಸುಮಾರು ಮೂರು ಅಡಿ ಉದ್ದದ ಒಳಹಿಡಿ ಗಾತ್ರದ

ಬಿದಿರಿನ ಕೋಲು ಬೆಲೆಬಾಳದ ವಸ್ತುಗಳು ಆಗಿರುವುದರಿಂದ, ಮೇಲ್ಮನವಿ ಅವಧಿಯ ನಂತರ ನಾಶಪಡಿಸಲು ಆದೇಶಿಸಿದ್ದೇನೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 06ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:**

| | | |
|---|---|---|
| ಪ್ರಾಸಾ-1 | : | ಸವಿತ |
| ಪ್ರಾಸಾ-2 | : | ಬಸಪ್ಪ |
| ಪ್ರಾಸಾ-3 | : | ನಾಗರಾಜ |
| ಪ್ರಾಸಾ-4 | : | ಕರಿಯಪ್ಪ |
| ಪ್ರಾಸಾ-5 | : | ಮಂಜುನಾಥ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:**

| | | |
|---|---|---|
| ನಿಪಿ-1 | : | ಲಿಖಿತ ದೂರು |
| ನಿಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-2 | : | ಪ್ರಾಸಾ-1 ರವರ ಮುಂದುವರೆದ ಹೇಳಿಕೆ |
| ನಿಪಿ-3 ರಿಂದ 6 | : | ಪ್ರಾಸಾ-2 ರಿಂದ 5 ರವರ ಅಲ್ಲಗಳೆದ ಹೇಳಿಕೆಗಳು |

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:**

- ಇಲ್ಲ -

**<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು</u>**:

- ಇಲ್ಲ -

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.